ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್ಎಸ್ಎಸ್/ಚಟುವಟಿಕೆ/05/2017-18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 07-09-2018

**ಸುತ್ತೋಲೆ**

ವಿಷಯ: ಸ್ವಾಮಿ ವಿವೇಕಾನಂದರ ಚಿಕಾಗೊ ಉಪನ್ಯಾಸದ 125ನೇ ವರ್ಷಾಚರಣೆಯನ್ನು ಆಚರಿಸುವ ಬಗ್ಗೆ.
ಉಲ್ಲೇಖ:1) ರಾಜ್ಯ ಎನ್.ಎಸ್.ಎಸ್.ಅಧಿಕಾರಿಯವರ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/2018-19/192 ದಿನಾಂಕ: 05-09-2018.
2) ಮುಖ್ಯ ಕಾರ್ಯದರ್ಶಿಯವರ ಕಛೇರಿಯ ಪತ್ರ ಸಂಖ್ಯೆ:ಯುಸಕ್ರೀಇ/ಯುಸೇ/ಸ್ವಾಕಾ/15/18-19ದಿನಾಂಕ: 01-9-2018

*****

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ: 11-09-2018 ರಂದು ಸ್ವಾಮಿ ವಿವೇಕಾನಂದರು 1893ರಲ್ಲಿ ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಭಾರತದ ತತ್ವಾದರ್ಶಗಳನ್ನು ಹೃದಯಸ್ಪರ್ಶಿಯಾಗಿ ಅಲ್ಲಿ ಹಾಜರಿದ್ದ ಪ್ರತಿನಿಧಿಗಳಿಗೆ ತಿಳಿಸಿ ಜಗತ್ಪ್ರಸಿದ್ದವಾದ ದಿನ 11ನೇ ಸೆಪ್ಟಂಬರ್. ಈ ಐತಿಹಾಸಿಕ ಭಾಷಣ ನೀಡಿ 11 ನೇ ಸೆಪ್ಟಂಬರ್ 2018 ಕ್ಕೆ 125 ವರ್ಷಗಳಾಗಿದ್ದು, 11ನೇ ಸೆಪ್ಟಂಬರ್ 2018 ರಿಂದ 11ನೇ ಸೆಪ್ಟಂಬರ್ 2019 ರವರೆಗೆ ವಾರ್ಷಿಕೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ವಿಚಾರಸಂಕಿರಣ, ಜಾಗೃತಿ ಜಾಥಾ ಕಾರ್ಯಕ್ರಮಗಳು, ಯುವಜನರಲ್ಲಿ ಅರಿವು ಮೂಡಿಸುವ ಬಗ್ಗೆ ಭಾಷಣ, ಚರ್ಚಾಕೂಟದಂತಹ ಕಾರ್ಯಕ್ರಮಗಳನ್ನು ರೂಪಿಸಿ ಸಮಾಜದಲ್ಲಿ ಏಕತೆಯ ಭಾವನೆಯನ್ನು ಪಸರಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. **ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಪತ್ರವನ್ನು ಲಗತ್ತಿಸಲಾಗಿದೆ.**

ನಿರ್ದೇಶಕರು

ಇವರಿಗೆ ,

1) ರಾಜ್ಯದ ಎಲ್ಲಾ ಪಾಲಿಟೆಕ್ನಿಕ್, ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ
1) ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. ಇವರಿಗೆ ಮಾಹಿತಿಗಾಗಿ
3 ) ಇ-ಗೌರ್ನರ್ಸ್ ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸಲು.
4 ) ಕಚೇರಿ ಕಡತಕ್ಕೆ

ಕರ್ನಾಟಕ ಸರ್ಕಾರ

# ಮುಖ್ಯ ಕಾರ್ಯದರ್ಶಿಯವರ ಕಚೇರಿ

GOVT. OF KARNATAKA

# OFFICE OF THE CHIEF SECRETARY

ಯುಸಕ್ರೀಇ/ಯುಸೇ/ಸ್ವಾಕಾ/15/18-19 ದಿನಾಂಕ: 01.09.2018

## ಸುತ್ತೋಲೆ

ವಿಷಯ: ಸ್ವಾಮಿ ವಿವೇಕಾನಂದರ ಚಿಕ್ಯಾಗೋ ಉಪನ್ಯಾಸದ 125ನೇ ವರ್ಷಾಚರಣೆಯನ್ನು ಆಚರಿಸುವ ಕುರಿತು.

***********

ಸ್ವಾಮಿ ವಿವೇಕಾನಂದರು 1893 ರಲ್ಲಿ ಚಿಕ್ಯಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಭಾರತದ ತತ್ವಾದರ್ಶಗಳನ್ನು ಹೃದಯಸ್ಪರ್ಶಿಯಾಗಿ ಅಲ್ಲಿ ಹಾಜರಿದ್ದ ಪ್ರತಿನಿಧಿಗಳಿಗೆ ತಿಳಿಸಿ ಜಗತ್ಪ್ರಸಿದ್ಧವಾದ ದಿನ 11 ನೇ ಸೆಪ್ಟಂಬರ್. ಈ ಐತಿಹಾಸಿಕ ಭಾಷಣ ನೀಡಿ 11 ನೇ ಸೆಪ್ಟಂಬರ್ 2018 ಕ್ಕೆ 125 ವರ್ಷಗಳಾಗಿದ್ದು, 11 ನೇ ಸೆಪ್ಟಂಬರ್ 2018 ರಿಂದ 11 ನೇ ಸೆಪ್ಟಂಬರ್ 2019 ರವರೆಗೆ ವಾರ್ಷಿಕೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಸರ್ಕಾರವು ನಿರ್ಧರಿಸಿದೆ.

ಯುವ ಪೀಳಿಗೆಗೆ ಹಾಗೂ ಸಾರ್ವಜನಿಕರಿಗೆ ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ಜೀವನ ಮೌಲ್ಯಗಳು, ವಿಶ್ವಶಾಂತಿ ಮತ್ತು ವಿವಿಧತೆಯಲ್ಲಿ ಏಕತೆಯ ಬಗ್ಗೆ ಚಿಕ್ಯಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಮಾಡಿರುವ ಭಾಷಣದ ತುಣುಕಗಳು ಹಾಗೂ ಸಾರ್ವಜನಿಕ ಸಭೆಗಳಲ್ಲಿ ಮಾಡಿರುವ ಭಾಷಣಗಳನ್ನು ತಲುಪಿಸುವುದು ಅವಶ್ಯವಾಗಿರುತ್ತದೆ.

ಕರ್ನಾಟಕ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯತ್ ಗಳು ಹಾಗೂ ಶಾಲಾ ಕಾಲೇಜುಗಳಲ್ಲಿ ವಿಚಾರ ಸಂಕಿರಣ, ಜಾಗೃತಿ ಜಾಥಾ ಕಾರ್ಯಕ್ರಮಗಳು, ಯುವಜನರಲ್ಲಿ ಅರಿವು ಮೂಡಿಸುವ ಬಗ್ಗೆ ಭಾಷಣ, ಚರ್ಚಾಕೂಟದಂತಹ ಕಾರ್ಯಕ್ರಮಗಳನ್ನು ರೂಪಿಸಿ ಸಮಾಜದಲ್ಲಿ ಏಕತೆಯ ಭಾವನೆಯನ್ನು ಪಸರಿಸಲು ಸ್ಥಳೀಯ ವಿವಿಧ ಸಂಘ ಸಂಸ್ಥೆಗಳು ಹಾಗೂ ಇಲಾಖೆಗಳ ಸಮನ್ವಯದೊಂದಿಗೆ ಆಯೋಜಿಸಬೇಕಾಗಿರುತ್ತದೆ.

. . . .2)